# ಅಂದದ ಕೈಗೆ ಬ್ಯಾಗೇ ಭೂಷಣ!



ವಿವಿಧ ವಿನ್ಯಾಸಗಳ ಹ್ಯಾಂಡ್‌ಬ್ಯಾಗ್‌ಗಳು ಫ್ಯಾಷನ್ ಜಗತ್ತಿನಲ್ಲಿ ಟ್ರೆಂಡ್ ಸೃಷ್ಟಿಸಿವೆ. ಸಾಮಾನ್ಯ ಜಂಭದ ಚೀಲದಿಂದ ಹಿಡಿದು ಆಕರ್ಷಕ ಕ್ರಾಸ್‌ಬಾಡಿ ಬ್ಯಾಗ್‌ಗಳವರೆಗೆ ಇಂದು ಬ್ಯಾಗ್‌ಗಳು ಮಹಿಳೆಯರ ಫ್ಯಾಷನ್ ಆ್ಯಕ್ಸೆಸರಿಗಳಾಗಿ ಮೆರೆಯುತ್ತಿವೆ.

■ ಪದ್ಮಾ ಮೂರ್ತಿ ಅರಸೀಕೆರೆ

ವ್ಯಾನಿಟಿ ಬ್ಯಾಗ್ ಫ್ಯಾಷನ್ ಇಂದು ನಿನ್ನೆಯದಲ್ಲ. ಯುವತಿ ಸ್ಟೈಲಾಗಿ ರೆಡಿ ಆಗಿ ವೈಯ್ಯಾರದಿಂದ ಬ್ಯಾಗ್ ಒಂದನ್ನು ಹೆಗಲಿಗೇರಿಸಿ ರ‍್ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡಿದ್ದನ್ನು ನೋಡಿದ ಮಹಿಳೆಯರು ತಾವೂ ಅದನ್ನೇ ಅನುಕರಿಸತೊಡಗಿದರು. ಬಾಲಿವುಡ್, ಸ್ಯಾಂಡಲ್‌ವುಡ್ ಸಿನಿಮಾಗಳಲ್ಲಿ ನಟಿಯರು ಚಂದದ ಹ್ಯಾಂಡ್‌ಬ್ಯಾಗ್ ತಿರುಗಿಸುತ್ತಾ ನಡೆದದ್ದೇ ತಡ, ಮಾರುಕಟ್ಟೆಯಲ್ಲಿ ತರಾವರಿ ಬ್ಯಾಗ್‌ಗಳ ಬಿರುಸಿನ ವ್ಯಾಪಾರ ಶುರು. ಫ್ಯಾಷನ್ ಮಾತ್ರ ಬದಲಾಗುತ್ತಲೇ ಬಂತು. ಇದೀಗ ಲೆದರ್‌ಬ್ಯಾಗ್, ಕಾಟನ್, ಫೋಮ್, ನೈಲಾನ್, ಖಾದಿ ಬ್ಯಾಗ್‌ಗಳು ವೈವಿಧ್ಯಮಯ ವಿನ್ಯಾಸಗಳಲ್ಲಿ ಲಭ್ಯ.

ಮಹಿಳೆಯರ ಹ್ಯಾಂಡ್‌ಬ್ಯಾಗ್ ಎಂದರೆ, ಅದರಲ್ಲಿ ಬ್ರಹ್ಮಾಂಡವೇ ತುಂಬಿರುತ್ತದೆ. ಎಲ್ಲರ ಕಣ್ಮನ ಸೆಳೆಯುವ ಉಪಯುಕ್ತ ಸಾಧನವಾಗಿರುವ ಹ್ಯಾಂಡ್‌ಬ್ಯಾಗ್‌ಗಳು ಸ್ಟೈಲಿಷ್ ಆಗಿಯೂ ಇರುತ್ತದೆ. ಕ್ರಾಸ್‌ಬಾಡಿ ಬ್ಯಾಗ್‌ಗಳಂತೂ ಎವರ್‌ಗ್ರೀನ್ ಫ್ಯಾಷನ್ ಎಂಬಂತಾಗಿದೆ. ಹೀಗಾಗಿ ಶಾಪಿಂಗ್ ಇರಲಿ , ಬಿಡಲಿ ಮಹಿಳೆ ಹೊರಗಡೆ ಹೊರಟರೆ, ಹೆಗಲಿಗೊಂದು ಬ್ಯಾಗು ತಗಲಿ ಹಾಕಿಕೊಳ್ಳಲೇಬೇಕು ಎಂಬಷ್ಟು ಅನಿವಾರ್ಯವಾಗಿದೆ.

ಮನೆ ಬಿಟ್ಟು ಹೊರಗಡೆ ಹೋದಾಗ, ಯಾರು ಏನೇ ಕೊಡಲಿ.. ಅದನ್ನು ಹಾಕಿಕೊಳ್ಳಲಾದರೂ.. ಬ್ಯಾಗ್ ಬೇಕು. ದಾರಿಯಲ್ಲಿ ಸಿಕ್ಕ ಕೆಲವು ಉಪಯುಕ್ತ ವಸ್ತುಗಳನ್ನು ಖರೀದಿ ಮಾಡುವಾಗಲೂ, ಬ್ಯಾಗುಗಳು ಅವಶ್ಯಕವಾಗಿರುತ್ತದೆ. ಇನ್ನು ಹೆಚ್ಚಿಗೆ ಸಾಮಾನು ಬೇಕಾಗಿದ್ದರೆ, ಹ್ಯಾಂಡ್ ಬ್ಯಾಗಿನೊಳಗೆ ಅಚ್ಚುಕಟ್ಟಾಗಿ ಮಾಡಿಸಿಟ್ಟಿಕೊಂಡ ನಾಕಾರು ಮಿನಿ ಬ್ಯಾಗ್‌ಗಳು ಸಮಯಕ್ಕೆ ಉಪಯೋಗಕ್ಕೆ ಬರುತ್ತದೆ.

## ಅಂದ ಚಂದದ ಬ್ಯಾಗ್

ಆಫೀಸಿಗೆ ಹೋಗುವ ಮಹಿಳೆಯರು.. ಚಿಕ್ಕವರು, ದೊಡ್ಡವರು ಎಂಬ ತಾರತಮ್ಯವಿಲ್ಲದೆ ಅಂದ ಚಂದದ ಬ್ಯಾಗನ್ನು ಭುಜಕ್ಕೆ ಹಾಕಿಕೊಂಡು ಹೊರಡುವ ಪರಿ ಪ್ಲೆಸೆಂಟ್ ಲುಕ್ ಅನ್ನೂ ಕೊಡುತ್ತದೆ. ಈ ಹ್ಯಾಂಡ್ ಬ್ಯಾಗ್ ಮಹಿಳೆಯರ ಪಾಲಿಗೆ ಒಂದು ಮಿನಿ ಉಗ್ರಾಣವೇ ಎಂದರೂ ತಪ್ಪಿಲ್ಲ. ಏನಾದರೂ ಬೇಕಾದರೆ, ಬ್ಯಾಗ್ ಒಳಗೊಂದು ಪುಟ್ಟ ಬ್ಯಾಗು ಅದನ್ನು ತೆಗೆದು